> ಆದ್ಯಾವ ಕೆಟ್ಟ ಗಳಿಗೆಯಲ್ಲಿ ಶಾಸ್ತ್ರಿಗಳು ಎದ್ದು ಬಂದಿದ್ದರೋ, ಮೊದಲ ನೋಟದಲ್ಲೇ ಸತ್ಯದರ್ಶನವಾಗಿತ್ತು. ಅವರು ನಂಬಿಕೊಂಡಿದ್ದ, ನೆಚ್ಚಿಕೊಂಡಿದ್ದ ಮಗ ತಾಂಬೂಲದ ಸುರುಳಿಯನ್ನು ಅವಳ ಬಾಯಿಗಿಟ್ಟಿದ್ದನ್ನು ಕಣ್ಣಾರೆ ಕಂಡ ಅವರಿಗೆ ಕಣ್ಣು ಕತ್ತಲೆ ಬಂದಂತಾಗಿತ್ತು.

ಬರುತ್ತಿದ್ದನಾದರೂ ಸ್ವತಂತ್ರವಾಗಿ ಯಾವುದೇ ಕಾರ್ಯದ ಮುಂದಾಳತ್ವ ವಹಿಸಿ ನಡೆಸಿ ಕೊಡಲು ಅವನಿಗೆ ಆತ್ಮವಿಶ್ವಾಸ, ಸ್ಥೈರ್ಯ ಇರಲಿಲ್ಲ. ಸೀರೆಯ ಸೆರಗು ಕಣ್ಣೆದುರು ಹಾದು ಹೋದರೆ ಮಂತ್ರ ತಪ್ಪುವ, ಉಗ್ಗುವ ಮಗನ ನಡವಳಿಕೆ ಶಾಸ್ತ್ರಿಗಳಿಗೆ ಬಿಸಿ ತುಪ್ಪ. ಸಾರ್ವಜನಿಕ ಸ್ವತ್ತಾಗಿರುವವರು, ಅವರ ಮರ್ಜಿ ಹಿಡಿಯಬೇಕಾದವರು, ಹೋದ ಹೋದ ಕಡೆಗಳಲ್ಲಿ ಕೈ, ಬಾಯಿಗಳ ಜೊತೆ ಚಾರಿತ್ರ್ಯವನ್ನೂ ಕಾಪಾಡಿಕೊಳ್ಳಬೇಕಾದ ಮಹತ್ವವನ್ನು ಪರೋಕ್ಷವಾಗಿ ಮಗನ ತಲೆಗೆ ತುಂಬಲು ನೋಡಿದ್ದರು. ಧಾಂಡಿಗನ ಹಾಗೆ ಬೆಳೆದು ನಿಂತಿರುವ ಮಗನೆದುರು ಇದನ್ನೆಲ್ಲಾ ನೇರಾನೇರವಾಗಿ ಹೇಳಲು ಅವರಿಗೂ ಮುಜುಗರ. “ಸಣ್ಣಕ್ಕಿದ್ದಾಗಿನಿಂದ ನೋಡಿದೋರ ಜೊತೆ ಸಲಿಗೆಯಿಂದ ನಾಕು ಮಾತಾಡಿದ್ರೆ ಅದರಲ್ಲ್ಯಾಕೆ ಹುಳುಕು ಹುಡುಕ್ತೀ ಮಾರಾಯಾ? ನಿನ್ನ ಹಾಗೆ ಗಿರ್ಕಂಡಿರೋಕೆ ಬರಲ್ಲಪ್ಪಾ ನಂಗೆ. ಕಡ್ಡೀನ ಗುಡ್ಡ ಮಾಡ್ತಿ ನೀನು...” ಮಗ ಮಕಕ್ಕೆ ಹೊಡೆದ ಹಾಗೆ ಹೇಳಿದಾಗ ಶಾಸ್ತ್ರಿಗಳು ಬೆಪ್ಪು ಕಟ್ಟಿದ್ದರು. ‘ಹೌದಾ? ನನ್ನ ದೃಷ್ಟಿಯಲ್ಲೇ ದೋಷ ಉಂಟಾ?’ ಎಂದು ಚಿಂತಿಸಿ ದಣಿದಿದ್ದರು. ಏನೆಂದರೂ ಮಗ ನಾಲ್ಕು ಜನ ಅಪ್ಪಂತವರು ಒಪ್ಪುವಂತೆ, ಸೈ ಅನ್ನುವಂತೆ ತಮ್ಮ ಉದ್ಯೋಗ ನಡೆಸಿಕೊಂಡು ಹೋಗಲು ಸಮರ್ಥನಲ್ಲ ಅನ್ನುವ ಹುಳು ಅವರ ತಲೆ ಹೊಕ್ಕುಬಿಟ್ಟಿತ್ತು. ‘ಅವನ ಹಣೆಯಲ್ಲಿ ಹತ್ತಿದಂತಾಗುತ್ತೆ’ ಎನ್ನುವ ನಿಲುವಿಗೆ ತಲುಪಿಬಿಟ್ಟಿದ್ದರು ನೀಲಕಂಠ ಶಾಸ್ತ್ರಿಗಳು.

★★★

ಹೊಕ್ಕ ಮನೆಗೆ ಹಳಬಳಾಗುತ್ತಾ ಹೋಗುತ್ತಿದ್ದಂತೆ ಗುಂಡಮ್ಮ ಆ ಮನೆಯಲ್ಲಿ ಜೀತದಾಳಿನ ಸ್ಥಾನಕ್ಕೆ ಸೀಮಿತಳಾದಳು. ಹೊಸ ಬಿಸಿ ತಗ್ಗಿ ಗಂಡಯ್ಯ ಕೂಡಾ ಅವಳಲ್ಲಿನ ಆಕರ್ಷಣೆಯನ್ನು ಕಳೆದುಕೊಂಡು ತಣ್ಣಗಾಗುವ ಸ್ಥಿತಿ ತಲುಪಿದ್ದ. ಇದ್ದೂ ಇಲ್ಲದಂತಾ ತವರು. ಕೆಲಸ ಮಾಡುವುದು ಅವಳಿಗೆ ಹೊಸ ವಿಷಯವೇನಲ್ಲ. ಅದು ಬಿಟ್ಟರೆ ಹೊತ್ತು ಕಳೆಯುವ ಯಾವ ವಿಧಾನವೂ ಅವಳಿಗೆ ಗೊತ್ತಿಲ್ಲ. ಗಂಡ ಕೂಡಾ ತನ್ನಮ್ಮನ ಜೊತೆ ಸೇರಿಕೊಂಡು ತನ್ನನ್ನು ಹಚಹಚಾ ಮಾಡಿದ್ದಾನೆ ಎಂದು ಅವಳಿಗೆ ಗೊತ್ತಾಗಿಬಿಟ್ಟಿತ್ತು. ಕೈ ಚೊಟ್ಟ ಮಾಡದೆ ಹೊಟ್ಟೆ ತುಂಬಾ ಊಟ ಇಕ್ಕುತ್ತಾರೆ ಎನ್ನುವುದೊಂದೇ ಆ ಮನೆಯಲ್ಲಿ ಅವಳಿಗಿದ್ದ ಸಮಾಧಾನ.

ಮದುವೆಯಾಗಿ ವರ್ಷ ಮೂರು ಕಳೆದಿದ್ದರೂ ಗುಂಡಮ್ಮ ಗರ್ಭಿಣಿಯಾಗಿಲ್ಲ ಎನ್ನುವುದು ಫಣಿಯಮ್ಮನ ದೊಡ್ಡ ದೂರು.

“ಮೊದ್ಲು ಕಾಲಬುಡ ನೋಡ್ಕಂಬೇಕು ಕಣೇ. ಮದುವೆಯಾಗಿ ಎಷ್ಟು ವರ್ಷದ ಮೇಲೆ ನಿಂಗೆ ಮಗ ಹುಟ್ಟಿದ್ದು?”

ಶಾಸ್ತ್ರಿಗಳು ತಿರುಗುಬಾಣ ಪ್ರಯೋಗಿಸಿದರೆ ಸೊಸೆಯನ್ನು ವೈಸಿಕೊಂಡು ಮಾತಾಡುತ್ತಾರೆಂದು